Calling Attention to a Matter of urgent Public Importance *Re*: Disturbance in Chamarajanagar, Ramasamudra Town.

Sri N. LOKAYYA NAIK (Virajpet).—Sir, I call the attention of the Hon'ble Chief Minister to the disturbance in Chamarajanagar-Ramasamudra Town in connection with Ganapathy procession.

10-30 A.M.

† Sri VEERENDRA PATIL (Chief Minister).—Sir, the immersion of Ganapathi idol installed by the Vidya Ganapathi Mandali at Chamarajanagar was due to take place on the night of 16-9-1970. In view of the fact that a serious rioting had occurred at Chamarajanagar in April 1970 when the annual procession of the G S S S entered Kadakapura Mohalla certain precautions had to be taken at the time of the procession organised by the Vidya Ganapathi Mandali. As a precautionary measure, the District Magistrate, Mysore, issued an order under section 35 of the Mysore Police Act (from 7 A.M. on 16-9-70 up to 7 A.M. on 17-9-1970) prohibiting the carrying of sticks, lathies, cudgels etc., and also stones or any corrosive substances. It was made clear to the members of the Vidya Ganapathy Mandali that they were at liberty to take out Ganapathy procession in the usual route as in previous years but the procession would not be allowed in Kadakpura Mohalla since there was a likelihood of the breach of peace. In fact, Kadakapura Mohalla was not on the usual route and there was absolutely no need for the Procession to pass through the narrow lane of Kadakapura Mohalla. Resenting the steps taken to regulate the conduct of the procession the Ganapathi Mandali decided not to immerse the idol in the early hours of 17-9-70 as scheduled, but started complaining against the police. As the tension increased and dead-lock ensued, the prohibitory order was extended for a further period of seven days *i. e.*, till 7-00 A.M. on 24-2-1970. As trouble was apprehended, sufficient police staff was also posted.

On 17-9-1970, both the District Magistrate and the Superintendent of Police visited Chamarajanagar and tried to presuade the organisers to avoid taking out the procession through Kadakapura Mohalla. Disregarding the advice, a procession including college boys and urchins was taken out in the town, shouting slogans condemning the police. At the western entrance of Kadakapura Mohalla, the police stopped them and requested them not to proceed further. Paying no heed to advice, they pushed the Sub-Inspector and pelted stones at the police, causing injuries to one Sub-Inspector and five other policemen. The Deputy Superintendent of Police, Nanjangud, who was on the spot warned the mob to disperse. As the crowd failed to disperse, the police were compelled to burst tear-gas shells and resort to a lathi-charge. Eight persons were injured and they were treated by the Medical Officer, Chamarajanagar as out-patients. Advocate Sri Nagaraj and 22 others

were arrested and a case under sections 143, 147, 148, 149, 332 and 353 IPC read with section 108 of the Mysore Police Act has been registered. The District Magistrate, Mysore, has extended the prohibitory order under section 35 of the Mysore Police Act in Chamarajanagar Town for a further period of 6 days from 24-9-1970 to 30-9-1970. The situation in the town is normal.

ಶ್ರೀ ಎನ್. ಲೋಕಯ್ಯನಾಯಕ್.—ಪ್ರೊಸೆಷನ್ನಿಗೆ ಪೋಲೀಸಿನವರು ಏನು ಪರ್ಮಿಷನ್ ಕೊಟ್ಟಿದ್ದರು ಅದರಲ್ಲಿ ಯಾವುದಾದರೂ ಇಂಥಾ ರಸ್ತೆಯಲ್ಲಿ ಹೋಗಬಾರದು ಎಂದು ಇತ್ತೇ? ಇನ್ನೊಂದು ವಿಷಯ ಏನೆಂದರೆ ಮೆರವಣಿಗೆಯಲ್ಲಿ ಯಾವುದೇ ಸ್ಲೋಗನ್ ಹಾಕಬಾರದು ಎನ್ನುವ ಪ್ರತಿಬಂಧಕ ಇತ್ತೇ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಪುಟ್ಟಸ್ವಾಮಿ.—ಈ ಬಗ್ಗೆ ನಾನೊಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ ಅದು ಬರುತ್ತದೆಯೇ ಹೇಗೆ?

ಶ್ರೀ ವೀರೇಂದ್ರಪಾಟೀಲ್.—ನಾನು ಕೊಟ್ಟಂತಹ ಉತ್ತರ ತಮ್ಮ ನೋಟೀಸಿಗೂ ಅನ್ವಯಿಸುತ್ತದೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಮೆರವಣಿಗೆಗೆ ಪೋಲೀಸಿನವರು ಅನುಮತಿಯನ್ನು ಕೊಡುವಾಗ ಸ್ಲೋಗನ್ ಹಾಕಬಾರದು ಎಂಬ ಕಂಡೀಷನ್ ಹಾಕಿದ್ದು ಸರಿಯೇ? ಆ ಕಂಡೀಷನ್ ಪ್ರಕಾರ ಗಣೇಶಾಕೀ ಜೈ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಾಗದೇ ಇದ್ದದ್ದು ತಮಗೆ ಗೊತ್ತಿದೆಯೇ? ಪರ್ಮಿಟ್‌ನಲ್ಲಿ ಕೆಲವು ಕಂಡೀಷನ್ಸ್ ಹಾಕಿದ್ದರಿಂದ ಚಾಮರಾಜನಗರದ ನಿವಾಸಿಗಳು ಪ್ರತಿಭಟನೆ ಮಾಡಿ 17ನೇ ತಾರೀಖು ನಾಗರೀಕರೆಲ್ಲರೂ ಸೇರಿ ಮತ್ತೊಂದು ಸಾರಿ ಪ್ರತಿಭಟನೆಯ ಮೆರವಣಿಗೆಯನ್ನು ಮಾಡುವಾಗ ಅವರ ಮೇಲೆ ಪೋಲೀಸಿನವರು ರಾಠಿಚಾರ್ಜ್ ಮಾಡಿ ಟೇರ್ ಗ್ಯಾಸ್ ಓಪನ್ ಮಾಡಿದ್ದು ಸರಿಯೇ? ಮತ್ತು ಆ ಪ್ರೊಸೆಷನ್ನಿಗೆ ಸಂಬಂಧ ಇಲ್ಲದೆ ಇರುವವರ ಮನೆಗಳಿಗೆ ಪೋಲೀಸಿನವರು ಹೋಗಿ ಎಲ್ಲರನ್ನೂ ಹೊಡೆದದ್ದು ಸರಿಯೇ? ಇದನ್ನೆಲ್ಲಾ ಎನ್‌ಕ್ವೈರಿ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡುತ್ತೀರಾ ?

ಶ್ರೀ ವೀರೇಂದ್ರಪಾಟೀಲ್.—ಈ ಬಗ್ಗೆ ಕೇಸ್ ರಿಪಿನ್ಸರಾಗಿದೆ. ಆದ್ದರಿಂದ ಈ ಬಗ್ಗೆ ಎಷ್ಟು ಹೇಳುವುದಕ್ಕೆ ಸಾಧ್ಯವಿತ್ತೋ ಅಷ್ಟನ್ನು ನಾನು ಹೇಳಿದ್ದೇನೆ. ಆ ಸಂದರ್ಭದಲ್ಲಿ ನಮ್ಮ ಹೋಮ್ ಸೆಕ್ರೆಟರಿಯವರು ಮೈಸೂರಿಗೆ ಹೋಗುತ್ತಿದ್ದರು. ಅವರಿಗೆ ಆಗ ನಾನು ಹೇಳಿದೆ, ಆ ಸ್ಥಳಕ್ಕೆ ಹೋಗಿ ಅಲ್ಲಿನ ಜನಗಳ ಜೊತೆಯಲ್ಲಿ ಚರ್ಚೆ ಮಾಡಿ ಮಾತನಾಡಿಕೊಂಡು ಬನ್ನಿ, ಅವರಿಗೆ ಏನು ಅಡ್ವೈಜ್ ಕೊಡಬೇಕೋ ಅದನ್ನು ಕೊಟ್ಟು ಬನ್ನಿ ಎಂದು. ಅದರಂತೆ ಅವರು ಆ ಸ್ಥಳಕ್ಕೆ ಹೋಗಿ ಆ ಗಣಪತಿ ಉತ್ಸವಕ್ಕೆ ಸಂಬಂಧಪಟ್ಟ ಜನರೊಡನೆ ಚರ್ಚೆ ಮಾಡಿ ಅಲ್ಲಿ ಇತ್ತರ ಜನರ ಮನಸ್ಸಿಗೆ ಫೀಲಿಂಗ್ ಆಗತಕ್ಕಂಥ ವೂಂಡ್ ಆಗತಕ್ಕಂಥ ಸ್ಲೋಗನ್ ಹಾಕಬಾರದು, ರಿಲಿಜಿಯಸ್ ಸ್ಲೋಗನ್ ಮಾತ್ರ ಹೇಳಬೇಕು ಎಂದು ಹೇಳಿ ಮೆರವಣಿಗೆಗೆ ಅನುಮತಿ ಕೊಡಿ ಎಂದು ಹೇಳಿ ಸಂಬಂಧಪಟ್ಟ ಪೋಲೀಸಿನವರಿಗೆ ಅವರು ಹೇಳಿ ಬಂದಿದ್ದಾರೆ.

ಶ್ರೀ ಎಸ್. ಪುಟ್ಟಸ್ವಾಮಿ.—ಸ್ವಾಮಿ, ಚಾಮರಾಜನಗರದ ನಾಗರೀಕರ ಗಣಪತಿ ಮಂಡಲಿಯವರು ಗಣಪತಿ ಉತ್ಸವವನ್ನು ಮಾಡಿ ಅದನ್ನು ನೀರಿಗೆ ಬಿಡುವ ಪ್ರಯತ್ನ ಮಾಡುವ ಕಾಲದಲ್ಲಿ ಚಾಮರಾಜನಗರದಲ್ಲಿ ಯಾವ ಒಂದು ಮತದವರೇ ಆಗಲೀ ಗಣಪತಿ ಮೆರವಣಿಗೆಗೆ ಅಡ್ಡಿ ಬಂದಿರಲಿಲ್ಲ ಸ್ಥಳದಲ್ಲಿರತಕ್ಕ ಮುಸ್ಲಿಮರು ಗಣಪತಿಯ ಮೆರವಣಿಗೆಯನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದರು. ಅವರ ಅಪೇಕ್ಷೆಪಣೆ ಏನೂ ಇರಲಿಲ್ಲ. ಆದರೆ ನಮ್ಮ ಡಿವಿಜನ್ನಿನ ಡಿ.ವೈ.ಎಸ್.ಪಿ, ಸರ್ಕಲ್ ಇನ್‌ಸ್ಪೆಕ್ಟರು ಮತ್ತು ಚಾಮರಾಜನಗರದ ಪೋಲೀಸ್ ಸ್ಟೇಷನ್ನಿಗೆ ಸಬ್‌ಇನ್‌ಸ್ಪೆಕ್ಟರು ಈ ಮೂರು ಜನಗಳು ಈ ಒಂದು ಸನ್ನಿವೇಶವನ್ನು ಸೃಷ್ಟಿಮಾಡಿ ಪೋಲೀಸಿನವರು ಒಂದು ದೌರ್ಜನ್ಯವನ್ನು ನಡೆಸತಕ್ಕಂಥಸ್ಥಿತಿಗೆ ಬಂದಿದೆ. ಸುಮಾರು 200-300 ಜನ ರಿಜರ್ವ್ ಪೋಲೀಸಿನವರನ್ನು ಮತ್ತು ಸ್ಪೆಷರ್ ಪೋಲೀಸಿನವರನ್ನು ಅವರು ಉಪಯೋಗ ಮಾಡಿಕೊಂಡು 16ನೇ ತಾರೀಖು ಆ ಮೆರವಣಿಗೆಗೆ ಸಂಬಂಧಪಟ್ಟ ರಸ್ತೆಗಳಲ್ಲಿ ಯಾರೂ ಕೂಡ ಮೆರವಣಿಗೆಗೆ ಅಡ್ಡಿ ಮಾಡುವುದಿಲ್ಲ ಎನ್ನುವ ಸಂದರ್ಭ ಇದ್ದರೂ ಕೂಡ ಎರಡು ರಿಜರ್ವ್ ಪೋಲೀಸ್ ವ್ಯಾನ್‌ಗಳನ್ನು ರಸ್ತೆಗೆ ಅಡ್ಡರಾಗಿ ಪೂರ್ವ ಪಶ್ಚಿಮ ದಿಕ್ಕಿಗೆ ಅಡ್ಡರಾಗಿಟ್ಟು ಜನರನ್ನು ಪ್ರಚೋದನೆ ಮಾಡಿ ಚಾಮರಾಜನಗರಕ್ಕೆ ವ್ಯಾಪಾರಕ್ಕಾಗಿ

(ಶ್ರೀ ಎಸ್. ಪುಟ್ಟಸ್ವಾಮಿ)

ಬಂದಂಥ ಜನಗಳನ್ನೂ ಬ್ಯಾಂಕಿಗೆ ಕಂತುಕಟ್ಟುವುದಕ್ಕೆ ಬಂದಿದ್ದಂತಹ ಜನಗಳನ್ನೂ ಮತ್ತು ಮೆರವಣಿಗೆ ಸಂಬಂಧಪಟ್ಟ ರಸ್ತೆಗಳನ್ನೂ ಬಿಟ್ಟು ಮೂಲೆ ಮೂಲೆಯಲ್ಲಿ ಮನೆಗಳಲ್ಲಿದ್ದಂತಹ ಜನಗಳನ್ನು ಹೊಡೆದು ಗಾಯಗೊಳಿಸಿದಂಥಾದ್ದು ತಮ್ಮ ಗಮನಕ್ಕೆ ಬಂದಿಲ್ಲವೇ! ರಾಜಕೀಯ ಕಾರಣಗಳಿಗಾಗಿ ಪೋಲೀಸಿನವರು ಸನ್ನಿವೇಶವನ್ನು ಸೃಷ್ಟಿ ಮಾಡಿಕೊಂಡು ಜನಗಳ ಮೇಲೆ ದೌರ್ಜನ್ಯವನ್ನು ನಡೆಸಿ ಜನತೆಯನ್ನು ಹೆದರಿಸುವಂಥಾ ಕಾರ್ಯವನ್ನು ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ವಿಚಾರಣೆ ನಡೆಸುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡುತ್ತೀರಾ ?

ಶ್ರೀ ವೀರೇಂದ್ರಪಾಟೀಲ್.—ಆಲ್ಲಿ ವಿಚಾರ ಏನಾಗಿದೆ ಏಂಬುದನ್ನು ನಾನು ಈಗಾಗಲೇ ತಿಳಿಸಿದ್ದೇನೆ. ಅಲ್ಲಿ ಯಾವ ರಾಜಕೀಯವೂ ಇಲ್ಲ. ಚಾಮರಾಜನಗರದಲ್ಲಿ ಪ್ರತಿಸಲವೂ ಗಲಭೆ ಆಗುತ್ತಿದೆ. ಎಲ್ಲಾ ಪ್ರಿಕಾಷನರಿ ಮೇಜರ್ಸ್ ತೆಗೆದುಕೊಳ್ಳುವ ಜವಾಬ್ದಾರಿ ಅನ್ವಳದ ಪೋಲೀಸಿನವರಿಗೆ ಹಾಗೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಸಂಬಂಧಪಟ್ಟದ್ದು. ಅವರು ಪ್ರತಿಸಲ ಸರ್ಕಾರದ ಆದೇಶವನ್ನು ಕೇಳಬೇಕಾಗಿಲ್ಲ. ಮೊದಲನೆಯ ಸಲವೇ ನಾವು ಪೋಲೀಸಿನವರಿಗೆ ಹೇಳಿದ್ದೇವೆ, ನಿಮ್ಮ ಮಾಮೂಲಿನ ಪ್ರಿಕಾಷನರಿ ಮೇಜರ್ಸ್ ತೆಗೆದುಕೊಳ್ಳಿ, ಗಲಭೆ ಆಗುವುದಕ್ಕೆ ಸಾಧ್ಯವಿದೆ, ಅನಾಹುತವಾದರೆ ಅದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ ಎಂದು. ಈ ರೀತಿಯಾಗಿ ಪ್ರಿಕಾಷನ್ ತೆಗೆದುಕೊಂಡರೂ ಕೂಡ ಗಣಪತಿ ಮಂಡಲಿಯವರು ಹಟ ಹಿಡಿದು ಪ್ರತಿವರ್ಷ ಮೆರವಣಿಗೆಯಲ್ಲಿ ಗಣಪತಿ ಉತ್ಸವವನ್ನು ತೆಗೆದುಕೊಂಡು ಹೋಗುತ್ತಿದ್ದ ರೀತಿಯಲ್ಲಿಯೇ ತೆಗೆದುಕೊಂಡು ಹೋಗಬೇಕು ಎಂದು ಹಟ ಹಿಡಿದು ಇಂಥಾ ರೋಡಿನಲ್ಲಿ ಉತ್ಸವವನ್ನು ತೆಗೆದುಕೊಂಡು ಹೋಗಬೇಡಿ ಎಂದು ಹೇಳಿದರೂ ಕೂಡ ಆ ರೋಡಿನಲ್ಲಿ ಉತ್ಸವವನ್ನು ತೆಗೆದುಕೊಂಡು ಹೋಗಿದ್ದಾರೆ. ಪೋಲೀಸಿನವರು ಪ್ರಿಕಾಷನರಿ ಮೇಜರ್ಸ್ ತೆಗೆದುಕೊಳ್ಳದೆ ಒಂದುವೇಳೆ ಏನಾದರೂ ಗಲಭೆ ಆದರೆ ಪೋಲೀಸಿನವರು ಮೊದಲೇ ಪ್ರಿಕಾಷನ್ ತೆಗೆದುಕೊಂಡಿಲ್ಲ ಎಂದು ಹೇಳುತ್ತಾರೆ ಆದರೆ ಈ ಕೇಸಿಗೆ ಸಂಬಂಧಪಟ್ಟ ಹಾಗೆ ಪೋಲೀಸಿನವರು ಪ್ರಿಕಾಷನ್ ತೆಗೆದುಕೊಂಡಿದ್ದರೂ ಕೂಡ ಅನಾವಶ್ಯಕವಾಗಿ ಪೋಲೀಸಿನವರು ಜನರ ಮೇಲೆ ಹೆರಾಸ್ ಮಾಡಿದ್ದಾರೆ. ಎಂದು ಹೇಳಿ ಏನಾದರೂ ತಪ್ಪು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡಿದರೆ ಇದಕ್ಕೆ ಏನೂ ಉತ್ತರ ಹೇಳುವುದಕ್ಕೆ ನಾಧ್ಯವಿಲ್ಲ.

Sri AZIZ SAIT.—Is it not a fact that the Deputy Commissioner, Mysore, had convened a joint meeting of the representatives of the various communities and the representatives of the Mandali agreed in the presence of the Deputy Commissioner to immerse the idol on the 19th September at 3 P.M. which was also reported in the press ? On a subsequent occasion when the Mandali representatives were called by the Deputy Commissioner, is it not a fact that the Mandali representatives refused to agree to the suggestion and they are now demanding that the police must apologise? And is it not a fact that the Muslims also said that whichever route they want, they could take and they said that they had nothing to object so long as the Government took precautionary measures for the safety and security of the people lying in the area ?

ಶ್ರೀ ವೀರೇಂದ್ರಪಾಟೀಲ್.—ಅವರು ಹೇಳಿದ ಮೊದಲನೆ ವಿಚಾರದ ಬಗ್ಗೆ ನನ್ನ ಹತ್ತಿರ ಈಗ ವರದಿ ಇಲ್ಲ. ಎರಡು ಪಂಗಡಗಳವರು ಒಪ್ಪಿಕೊಂಡಿದ್ದಾರೆಂಬ ಕಾರಣದ ಮೇಲೆ ಪೋಲೀಸರು ಸುಮ್ಮನಿರುವುದಕ್ಕಾಗುವುದಿಲ್ಲ. ಅವರು ರಾ-ಅಂಡ್ ಆರ್ಡರ್ ಮೇನ್‌ಟೇನ್ ಮಾಡಬೇಕಾಗುತ್ತದೆ. ಆವರ ಸಲುವಾಗಿ ಪೋಲೀಸರು ಕೆಲವೊಂದು ಕ್ರಮಗಳನ್ನು ಕೈಕೊಂಡಿದ್ದಾರೆ. ಒಂದು ಪಂಗಡದವರು ಕೆಲವು ಸ್ಲೋಗನ್ಸ್ ಹಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿದ್ದರು, ಅದರಂತೆ ಅವಕಾಶ ಕೊಟ್ಟಿದ್ದಾರೆ. ಈಗ ಇದನ್ನೇ ಬೆಳೆಸಿಕೊಂಡು ಹೋಗುವುದಾದರೆ ಆದರಿಂದ ಎರಡು ಪಂಗಡದವರಿಗೆ ಘರ್ಷಣೆಯಾಗಿ ಪಾತಾಪರಣ ಹದಗೆಡುತ್ತದೆಂದು ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ.

Petition by the President of Harihar Traders Association

Presentation

Sri H. SIDDAVEERAPPA (Harihar):—Under Rule 131 of the Rules of Procedure and Conduct of Business in the House, I present the petition signed by the President of Harihar Traders' Association regarding the selection of a site for locating the Market Yard in Harihar.

Mr. DEPUTY SPEAKER.—The petition is presented. It stands referred to the Petitions Committee.

Petition by Sri M. Basappa and Others

Presentation

Sri M. NAGAPPA.—I present the petition signed by Sri Basappa and others regarding the misuse of powers of the Government in selecting the delegates to Expo-70.

Mr. DEPUTY SPEAKER.—The petition ia presented. It stands referred to the Petitions Committee.

Sri S. S. ARAKERI.—I have sent a Call Attention notice regarding the local candidates.

Mr. DEPUTY SPEAKER.—I will look into it.

Manhandling of a business man in Bidarahalli, Bus stand

Sri V. N. PATIL.—I have sent a notice under rule 302 regarding the man-handling of businessman of Bidarahalli bus stand. I want to bring to the notice of the House the attrocities committed in the State. Innocent persons are dragged and punished.

Mr. DEPUTY SPEAKER.—I have received your letter and I will send it to the Government.

Sri V. N. PATIL.—I request the Chair to direct the Government by make a statement on a particular date.

Mr. DEPUTY SPEAKER.—I will send it.

Medical facilities to be Provided to the Doctors etc. at the Legislators' Quarters

Sri AZEEZ SAIT.—(Narasaimharaja)—Sir, yesterday there were complaints about the doctors and treatment given to legislators in the Legislators' Home. I did not want to intervene then. What has

(SRI AZIZ SAIT)

happened there is, the Estate Officer who is also the Marshal, is not devoting sufficient attention. He is reckless and not responsive. The poor doctor wanted a stove and asked for the same. Till today he is not given a stove. Yesterday the Director of Health Services visited the General hostel. The doctors are not given the required facilities. We have noticed that neither Speaker nor the Deputy Speaker have ever visited General Hostel or Legislators' Home. The previous Speaker had a little courtesy to visit us in our places and enquire abous our welfare. I do not understand how things are managed in the Legislature Secretariat. You have an arrogant officer as an Estate Officer.

MR. DEPUTY SPEAKER.—I will enquire into it. We will now take up the Bill.

Mysore Excise (Seconed Amendment) Bill, 1970—

Consideration of Clauses

CLAUSE 2.

SRI T. R. SHAMANNA.—Sir, I have an amendment to Clause 2. I will move it.

"That at page 3 in the proposed clause (11 A) the words 'Gulmohwa Cocoanut' shall be deleted."

MR. DEPUTY SPEAKER.—Amendment moved.

"That at page 3 in the proposed clause (11 A) the words 'Gulmohwa Cocoanut' shall be deleted."

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಯವರೇ, ಈಗ ನಾನು ತಂದಿರತಕ್ಕ ತಿದ್ದುಪಡಿಯ ಉದ್ದೇಶ ಇಷ್ಟೆ, ಈಗ ಹೆಂಡ ಇಳಿಸುವುದಕ್ಕೆ ತೆಂಗಿನಮರಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಇದ್ದಂಥ ಈಚಲುಮರಗಳನ್ನೆಲ್ಲಾ ಕಡಿದುಹಾಕಿರುವುದರಿಂದ ಈಗ ತೆಂಗಿನ ಮರಗಳನ್ನೇ ಹೆಂಡ ಇಳಿಸುವುದಕ್ಕೆ ಉಪಯೋಗಿಸುತ್ತಿದ್ದಾರೆ. ಇದರಿಂದ ತೆಂಗಿನ ಕಾಯಿಯ ಬೆಲೆ ಜಾಸ್ತಿಯಾಗಿದೆ. ಜೊತೆಗೆ ಕೊಬ್ಬರಿಎಣ್ಣೆಯ ಬೆಲೆಯೂ ಕೂಡ ಜಾಸ್ತಿಯಾಗಿದೆ. ಇದರಿಂದ ಸಾಮಾನ್ಯ ನಾಗರೀಕರಿಗೆ ತೊಂದರೆಯಾಗಿದೆ. ಒಂದು ಕಡೆ ಸರ್ಕಾರದವರಿಗೆ ಲಾಭವಾಗುತ್ತಿದ್ದರೆ ಇನ್ನೊಂದು ಕಡೆ ನಾಗರೀಕರಿಗೆ ಇನ್'ಡೈರಕ್'ಟ್ ಆಗಿ ಹೆಚ್ಚಿನ ತೆರಿಗೆ ಬೀಳುತ್ತಿದೆ, ಆದ್ದರಿಂದ ಇನ್ನು ಮುಂದೆ ತೆಂಗಿನಮರದಿಂದ ಹೆಂಡ ಇಳಿಸುವ ಪದ್ಧತಿಯನ್ನು ತೆಗೆಯುಬೇಕೆಂದು ಈ ಒಂದು ತಿದ್ದುಪಡಿಯನ್ನು ನಾನು ತಂದಿದ್ದೇನೆ. ಇದನ್ನು ಒಪ್ಪಿಕೊಳ್ಳಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ರಾಮಕೃಷ್ಣ ಹೆಗಡೆ (ಹಣಕಾನು ಯೋಜನೆ ಮತ್ತು ಯುವಜನ ಕಲ್ಯಾಣ ಶಾಖೆಗಳ ಮಂತ್ರಿಗಳು).—ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದಕ್ಕೆ ವಿಷಾದವಾಗುತ್ತದೆ. ತೆಂಗಿನಮರದಿಂದ ಟಾಡಿ ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದರಿಂದ ತೆಂಗಿನಕಾಯಿಯ ಬೆಲೆ ಜಾಸ್ತಿಯಾಗಿದೆ ಎಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ